ದೊಡ್ಡದಾಗುತ್ತಿದೆ ಅಂದರ್ಥ, ಅಂದರೆ ಪಾಯದಲ್ಲೇ ಸಮಸ್ಯೆಯಿರುವುದು ಸಾಬೀತಾದಂತೆ. 'ಆಗ ದೊಡ್ಡ ಕೆಲಸವೇ ಮೈಮೇಲೆ ಬಿತ್ತೆಂದುಕೊಳ್ಳಿ. ಯಾವುದೂ ಕಾದು ನೋಡೋಣ' ಎಂದು ಹೇಳಿ ಹೋದ.

ಪ್ರದೀಪ ಬಿರುಕಿನಲ್ಲಿ ಮೊಳೆಯನ್ನು ತೂರಿಸಿಟ್ಟು, ದಿನವೂ ಬೆಳಿಗ್ಗೆ, ಸಾಯಂಕಾಲ ಬಿದ್ದಿದೆಯೇ ಎಂದು ನೋಡತೊಡಗಿದ. ಮೊಳೆ ಅಲ್ಲೇ ಇದೆಯೆಂದಾದರೆ ಸಮಾಧಾನಗೊಳ್ಳುತ್ತಿದ್ದ. ಇಲ್ಲಸಲ್ಲದ ಹೊತ್ತಿನಲ್ಲಿ ಆತನಿಗೆ ಬಿರುಕಿನಲ್ಲಿರುವ ಮೊಳೆ ಧುತ್ತನೆ ನೆನಪಾಗಿಬಿಡುತ್ತಿತ್ತು. ಒಮ್ಮೊಮ್ಮೆಯಂತೂ ಹೆಂಡತಿಯೊಡನೆಯ ಮಿಲನ ಮಹೋತ್ಸವದ ನಡುವೆಯೂ ಅದು ನೆನಪಾಗಿ ರಸಭಂಗವಾಗುತ್ತಿತ್ತು. ಮನೆಯ ಮುಂಭಾಗವನ್ನು ಕೆಡವಿ ಹೊಸದಾಗಿ ಕಟ್ಟುವ ಪ್ರಸಂಗ ಬಂದರೆ ಎಂಬುದನ್ನು ಊಹಿಸಿ ಭಯವಾಗುತ್ತಿತ್ತು. ಅಲ್ಲದೇ ಮೊಳೆ ದೊಡ್ಡದಾಗುತ್ತಾ ಬೃಹದಾಕಾರವಾಗಿ ಬೆಳೆದಂತ ವಿಚಿತ್ರ ಕನಸುಗಳು ಬಿದ್ದು ಎಚ್ಚರವಾಗಿಬಿಡುತ್ತಿತ್ತು. ನಡುರಾತ್ರಿಯಲ್ಲಿ ಎದ್ದು ಹೋಗಿ ಕೋಣೆಯ ಬಾಗಿಲು ತೆರೆದು ಮೊಳೆ ಅಲ್ಲೇ ಇದೆಯೇ ಎಂದು ನೊಡುತ್ತಿದ್ದ ಆತ.

ಮನೆ ಖಾಲಿ ಮಾಡಿಕೊಂಡು ಬೇರೆಡೆ ಹೋಗಿಬಿಟ್ಟರೆ ಹೇಗೆ ಎಂಬುದಾಗಿಯೂ ವಿಚಾರಿಸತೊಡಗಿದ. ಆದರೆ ಸಿಗಬೇಕಲ್ಲ? ಸಿಕ್ಕರೆ, ಎಲ್ಲರೀತಿಯಲ್ಲೂ ಅನುಕೂಲಕರವಾಗಿರುವ ಇದನ್ನು ಬಿಟ್ಟು ಹೋಗುವುದು ಸುಲಭದ ಮಾತೇ? ಅದರಲ್ಲೂ ಮನೆ ಖಾಲಿ ಮಾಡುವ ಮೊದಲು ಮಾಲೀಕ ತಾನೇ ಬಂದು ಅಥವಾ ಯಾರನ್ನಾದರೂ ಕಳಿಸಿ ಪರಿಶೀಲಿಸದೆಯೇ ಬಿಟ್ಟಾನೇ? ಆಗ ಬಿರುಕಿಗೆ ಕಪಾಟನ್ನು ಅಡ್ಡಲಾಗಿಟ್ಟು ಮರೆಮಾಚಿ ಬಿಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಬಹುದೇ? ಯಾವುದೂ ಈ ಕುರಿತು ಹೆಂಡತಿಯೊಡನೆ ಚರ್ಚಿಸಬೇಕು ಅಂದುಕೊಂಡ.

★★★

ಪ್ರತಿಸಲದಂತೆ ತಿಂಗಳ ಬಾಡಿಗೆಯನ್ನು ಟ್ರಾನ್ಸ್‌ಫರ್ ಮಾಡಿ ಸ್ಕ್ರೀನ್‌ಶಾಟನ್ನು ಮಾಲೀಕನಿಗೆ ವಾಟ್ಸ್‌ಆ್ಯಪ್ ಮಾಡಿದ ಪ್ರದೀಪ. ಆಕಡೆಯಿಂದ 'ಥ್ಯಾಂಕ್ಸ್' ಅನ್ನುವ ಉತ್ತರ ಬಂತು. ಅದರ ಹಿಂದೆಯೇ ಮತ್ತೆರಡು ಮೆಸೇಜುಗಳು–

'ಮುಂದಿನ ವಾರ ಕೆಲದಿನಗಳ ಮಟ್ಟಿಗೆ ಭಾರತಕ್ಕೆ ಬರುತ್ತಿದ್ದೇನೆ.'

'ನನ್ನ ಕೋಣೆಯಲ್ಲೇ ಉಳಿದುಕೊಳ್ಳುವೆ. ಸ್ವಲ್ಪ ಕ್ಲೀನ್ ಮಾಡಿಸಿ ಇಡಲು ಸಾಧ್ಯವೇ?'

ಪ್ರದೀಪ, ಏನೆಂದು ಉತ್ತರಿಸಿದರೆ ಏನಾಗಬಹುದೆಂದು ತಿಳಿಯದೇ ಟೈಪ್ ಮಾಡಿ ಮಾಡಿ ಅಳಿಸತೊಡಗಿದ.

## ಕರ್ಕಿ ಕೃಷ್ಣಮೂರ್ತಿ

ವೃತ್ತಿಯಲ್ಲಿ ಸಿವಿಲ್ ಎಂಜಿನಿಯರ್. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಕರ್ಕಿ ಅವರ ಊರು. ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿರುವ ಅವರು ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಸೀನಿಯರ್ ಜನರಲ್ ಮ್ಯಾನೇಜರ್. 'ಮಳೆ ಮಾರುವ ಹುಡುಗ' ಮತ್ತು 'ಗಾಳಿಗೆ ಮೆತ್ತಿದ ಬಣ್ಣ' ಎನ್ನುವ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಹಲವಾರು ಲೇಖನಗಳು, ಕತೆಗಳು ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.